ದಿನಾಂಕಃ 20.12.2024 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

**ಪಾಟೀ ಸವಾಲುಃ 1(ಎ)ನೇ ಎದುರುದಾರರ ಪರಃ ಶ್ರೀ ಎನ್ ಎನ್ ಎಂ ಪರ ಶ್ರೀಮತಿ ಎಸ್ ಆರ್ ಎಸ್ ವಕೀಲರಿಂದಃ**

1. ಅಪಘಾತವನ್ನು ನಾನು ಖುದ್ದು ನೋಡಿಲ್ಲ ಎಂದರೆ ಸರಿ. ಅಪಘಾತವು ಯಾವ ರೀತಿ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತ್ಯಕ್ಷ ಸಾಕ್ಷಿಯಾದ ರಫೀಕ್ ನನ್ನ ಸಂಬಧಿಕ ಎಂದರೆ ಸರಿಯಲ್ಲ. ರಫೀಕ್ ಮತ್ತು ಶಶಿಕುಮಾರ್ ಸ್ನೇಹಿತರು ಎಂದರೆ ಶಶಿಕುಮಾರ್ ನನ್ನ ಮಗನ ಮಾಲೀಕ, ರಫೀಕ್ ಯಾರೆಂದು ಗೊತ್ತಿಲ್ಲ. ರಫೀಕ್ ಮತ್ತು ಶಶಿಕುಮಾರ್ ಅಪಘಾತ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ರಫೀಕ್ ಮತ್ತು ಶಶಿಕುಮಾರ್ ಸ್ನೇಹಿತರಾಗಿದ್ದು, ನಾನು ಅವರ ಮೂಲಕ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ವಿಚಾರವನ್ನು ನನಗೆ ಶಶಿಕುಮಾರ್ ಫೋನ್ ಮಾಡಿ ತಿಳಿಸಿರುತ್ತಾರೆ. ಅಪಘಾತವು ಎನ್ ಹೆಚ್ ರಸ್ತೆಯಲ್ಲಿ ಆಗಿರುತ್ತದೆ ಎಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ಸರ್ಕಲ್ ಇದೆ ಎಂದರೆ ಸರಿ. ಸದರಿ ರಸ್ತೆ ಬೆಂಗಳೂರು- ಮೈಸೂರು ಹೆದ್ದಾರಿಯಾದ ಕಾರಣ ಅಲ್ಲಿ ಹೆಚ್ಚು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಮೈಸೂರಿನಿಂದ ಬೆಂಗಳೂರಿನ ಕಡೆಗೆ ಬರುವ ರಸ್ತೆ ಇಳಿಮುಖವಾಗಿದೆ ಎಂದರೆ ಸರಿ. ಬೆಂಗಳೂರಿನಿಂದ ಮೈಸೂರಿಗೆ ಹೋಗುವ ರಸ್ತೆ ಏರುಮುಖವಾಗಿದೆ ಎಂದರೆ ಸರಿ. ರಸ್ತೆಯು ಇಳಿಮುಖ ಹಾಗೂ ಏರುಮುಖವಾಗಿರುವ ಕಾರಣ ಅಲ್ಲಿ ಬ್ಯಾರಿಕೇಟರ್ ಹಾಕಿರುತ್ತಾರೆ ಎಂದರೆ ಸರಿ. ಬ್ಯಾರಿಕೇಟರ್ ಇರುವ ಕಾರಣ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ನನಗೆ ಗೊತ್ತಿಲ್ಲ.

2. ಟಿಪ್ಪರ್ ಲಾರಿಯಲ್ಲಿ ಎಂ ಸ್ಯಾಂಡ್ ಮರಳು ಇತ್ತು ಎಂದರೆ ಸರಿ. ಟಿಪ್ಪರ್ ಲಾರಿಯಲ್ಲಿ ಡಸ್ಟ್ ಇದ್ದ ಕಾರಣ ಅದನ್ನು ನಿಧಾನವಾಗಿ ಚಲಾಯಿಸಿಕೊಂಡು ಅದರ ಚಾಲಕ ಬರುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮಗ ಅತಿವೇಗವಾಗಿ ಹೋಗುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮಗ ವಾಹನವನ್ನು

ಅತಿವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿ ಅಪಘಾತ ಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಮಾಹಿತಿಯನ್ನು ನಾನೇ ನೀಡಿರುತ್ತೇನೆ ಎಂದರೆ ಸರಿ. ನನ್ನ ಮಗ ಶವ ಸಾಗಾಣಿಕೆಗೆ ರೂ. 10 ಸಾವಿರ, ಆತನ ಶವಸಂಸ್ಕಾರಕ್ಕೆ ರೂ.1,40,000/- ಹಾಗೂ ಅಸ್ಪತ್ರೆ ಖರ್ಚಿಗೆ ರೂ.1 ಲಕ್ಷ ಖರ್ಚು ಮಾಡಿದ್ದೇವೆ ಎಂದು ತೋರಿಸಲು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಕೆಲವನ್ನು ಕಳೆದುಕೊಂಡಿರುತ್ತೇನೆ. ನನ್ನ ಮಗ ಮಾಸಿಕ ರೂ.15,000/- ದುಡಿಯುತ್ತಿದ್ದ ಹಾಗೂ ಮೆಕಾನಿಕ್ ಕೆಲಸ ಮಾಡುತ್ತಿದ್ದ ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ಅಪಘಾತವಾದ ದಿನದಂದು ಟಿಪ್ಪರ್ ಲಾರಿ ಬೋರೇಗೌಡ ಅವರ ಹೆಸರಿನಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ದೂರು ಬೋರೇಗೌಡ ಅವರ ಮೇಲೆ ನೀಡಿರುತ್ತೇವೆ ಎಂದು ನುಡಿಯುತ್ತಾರೆ. 2ನೇ ಎದುರುದಾರರ ಹೆಸರಿಗೆ ಟಿಪ್ಪರ್ ಲಾರಿಯನ್ನು ವರ್ಗಾವಣೆ ಮಾಡಿದ್ದು, ಫಾರಂ ನಂ. 29 ಮತ್ತು 30 ಅನ್ನು 2ನೇ ಎದುರುದಾರರಿಗೆ ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ವಿಮೆ ಸಹ 2ನೇ ಎದುರುದಾರರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಶಶಿಕುಮಾರ್ ಮತ್ತು ಪೊಲೀಸರು ಶಾಮೀಲಾಗಿ ಟಿಪ್ಪರ್ ಲಾರಿ ಚಾಲಕನ ವಿರುದ್ದ ಸುಳ್ಳು ದೂರನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ಅಪಘಾತವು ದ್ವಿ ಚಕ್ರ ವಾಹನ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

**1(ಸಿ)ನೇ ಎದುರುದಾರರ ಪರ ವಕೀಲರು 1(ಎ)ನೇ ಎದುರುದಾರರ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

ಮರು ವಿಚಾರಣೆಃ ಇಲ್ಲ

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.